ಓಎಸ್ 251/2016

ಪಿ.ಡಬ್ಲ್ಯೂ: 01.

ದಿನಾಂಕಃ 21.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀಸವಾಲು ಎ ಜಿ ಪಿರವರಿಂದಃ**

ನಾನು ಜಮೀನಿನ ವಿಚಾರವಾಗಿ ದಾವೆಯನ್ನು ಹೂಡಿರುತ್ತೇನೆ. ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ತಿಳಿದಿಲ್ಲ ಎಂದರೆ ಸರಿ. ನನಗೆ ಸರ್ವೆ ನಂ.4/1 ರಲ್ಲಿ 1 ಎಕರೆ 9 ಗುಂಟೆ ಜಮೀನಿರುತ್ತದೆ. ನಿಪಿ20 ರ ಪ್ರಕಾರ ಸರ್ವೆ ನಂ.4/1 ರ ಜಮೀನಿನಲ್ಲಿ 38 ಗುಂಟೆ ನನ್ನ ಹೆಸರಿನಲ್ಲಿ ಹಾಗೂ 21 ಗುಂಟೆ ಲಕ್ಷ್ಮಮ್ಮರವರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ನನಗೆ ಬಿಡಿಸಿಕೊಡಿ ಎಂದು ಈ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ತಿಗೆ ಸಂಬಂಧಪಟ್ಟಂತೆ ಆರ್ ಆರ್ ಟಿ 878/2010-11 ರಂತೆ ಮಾನ್ಯ ಉಪವಿಭಾಗಾಧಿಕಾರಿಗಳು ದಿಃ21.07.2010 ರಂದು ಆದೇಶ ಮಾಡಿರುತ್ತಾರೆ, ಆದರಲ್ಲಿ 1 ಎಕರೆ 38 ಗುಂಟೆ ಪೈಕಿ 19 ಗುಂಟೆ ಖರಾಬು ಕಳೆದು 1 ಎಕರೆ 19 ಗುಂಟೆ ಲಕ್ಷ್ಮಮ್ಮರವರಿಗೆ ಹಾಗೂ 21 ಗುಂಟೆ ನನ್ನ ಹೆಸರಿಗೆ ಅಳತೆ ಕಾರ್ಯ ಮಾಡಿ ಆಕಾರ್ ಬಂಧ್ ವಿಸ್ತೀರ್ಣ ತಿದ್ದುಪಡಿಗೊಳಿಸಿ ಆದೇಶವಾಗಿರುತ್ತದೆ ಎಂದರೆ ಸರಿ. ಎಸಿ ನ್ಯಾಯಾಲಯದ ಆದೇಶದ ಮೇರೆಗೆ ಎಂ ಆರ್ 2/2010-11 ರ ಪ್ರಕಾರ ಖಾತೆ ತಿದ್ದುಪಡಿಯಾಗಿರುತ್ತದೆ ಎಂದರೆ ಸರಿ. ಎ ಸಿ ನ್ಯಾಯಾಲಯದ ಆದೇಶದಿಂದ ತೊಂದರೆಯಾಗಿದ್ದರೆ ಅದನ್ನು ಡಿಸಿ ನ್ಯಾಯಾಲಯದಲ್ಲಿ ಪ್ರಶ್ನಿಸಬೇಕಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ.

ನನಗೆ ಸರ್ಕಾರದಿಂದ ದಾವಾಸ್ತಿ ಮಂಜೂರು ಆಗಿರುವುದಿಲ್ಲ ಎಂದರೆ ಸರಿ. ನಾನು ದಾವಾಸ್ತಿಯಲ್ಲಿ ಅಕ್ರಮವಾಗಿ ಸ್ವಾಧೀನದಲ್ಲಿರುತ್ತೇನೆ ಎಂದರೆ ಸರಿ. ನಾನು ಸರ್ಕಾರದ ವಿರುದ್ಧ ಸುಳ್ಳು ದಾವೆಯನ್ನು ಹೂಡಿ ಸುಳ್ಳು ದಾಖಲಾತಿಯನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಗೊತ್ತಿಲ್ಲ.

**ಮರುವಿಚಾರಣೆಃ**ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.